ದಿನಾಂಕ 07-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಕೆ.ಎಂ.ವಿ., ವಕೀಲರಿಂದಃ-

3. ದಾವಾ ಸ್ವತ್ತಿನ ಸರ್ವೇ ನಂಬರ್‌ನಲ್ಲಿ ಹದಿನಾರು ಮುಕ್ಕಾಲು ಗುಂಟೆಯ ಪಹಣಿ ಈಗಲೂ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ಮೂಲತಃ ಸದರಿ ಸರ್ವೇ ನಂಬರ್ ನಲ್ಲಿ ನಮಗೆ ಇದ್ದ ಸ್ವತ್ತು 3 ಎಕರೆ 21 ಗುಂಟೆ ಎಂದರೆ ಸರಿ. ಓ.ಎಸ್.192/1998 ಮತ್ತು ಓ.ಎಸ್.36/2000 ದಾವೆಗಳನ್ನು ಸಲ್ಲಿಸಿದ್ದು ದಾವಾ ಸ್ವತ್ತಿನ ಸರ್ವೇ ನಂ.51/1ರಲ್ಲಿ 3 ಎಕರೆ 21 ಗುಂಟೆ ಹೊರತುಪಡಿಸಿ, ಉಳಿದ ಸ್ವತ್ತುಗಳಿಗೆ ಎಂದರೆ ಸರಿ. ಸದರಿ 3 ಎಕರೆ 21 ಗುಂಟೆ ನನಗೆ ನನ್ನ ಪತಿ ಸಂಪಂಗಯ್ಯರವರಿಂದ ದಾನಪತ್ರದ ಮುಖಾಂತರ ಬಂದ ಸ್ವತ್ತು ಎಂದರೆ ಸರಿ. ಚಿಕ್ಕಮುನಿಯಮ್ಮ ನನ್ನ ತಾಯಿ. ನನ್ನ ತಂದೆ, ತಾಯಿಗೆ ನಾನು ಹಿರಿಯ ಮಗಳು ಎಂದರೆ ಸರಿ. ರಂಗ ಎಂಬುವವರು ನನ್ನ ತಮ್ಮ ಎಂದರೆ ಸರಿ. ಸರ್ವೇ ನಂ.51/1ರಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಮ್ಮ ಎಲ್ಲಾ ಸೇರಿ 1 ಎಕರೆಯನ್ನು ದಿನಾಂಕ 05.05.2006ರಲ್ಲಿ ಲಕ್ಷ್ಮೀನಾರಾಯಣಯ್ಯ ಎಂಬುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಕ್ರಯದ ಹಣ ಎರಡು ಲಕ್ಷ ರೂಗಳನ್ನು ನಗದಾಗಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ನಮ್ಮ ತಾಯಿ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ.

4. ದಿನಾಂಕ 06.08.2010ರಂದು ನಾನು ಮತ್ತು ನನ್ನ ಪತಿ ದಾವಾ ಸ್ವತ್ತಿನ ಮಾಲೀಕರು ಎಂದು ವ್ಯವಸಾಯ ಸೇವಾ ಸಹಕಾರ ಸಂಘ ಬ್ಯಾಂಕ್ ನಿಯಮಿತ, ಬಿಡದಿ ಇಲ್ಲಿಗೆ ಪ್ರತಿಜ್ಞಾಲೇಖ/ಡಿಕ್ಲೇರೇಷನ್ ಸಲ್ಲಿಸಿದ್ದೇವೆ ಎಂದರೆ ಸರಿ. ಸರ್ವೇ ನಂ.51/1ರಲ್ಲಿ ಒಂದು ಮುಕ್ಕಾಲು ಗುಂಟೆಯನ್ನು ನನ್ನ ಪತಿಯವರು ಕಾಮಯ್ಯ ಮತ್ತು ನಾಗರಾಜುರವರಿಂದ ದಿನಾಂಕ 07.08.2012ರಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಪತಿ 1,10,000/- ರೂಗಳನ್ನು ನಗದಾಗಿ ಕ್ರಯದ ಹಣ ಕೊಟ್ಟು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ.

5. ರಾಮಕೃಷ್ಣಯ್ಯರವರ ಮಗ ಲಕ್ಷ್ಮೀಕಾಂತ, ಕರಡಿಗೌಡನದೊಡ್ಡಿರವರು ಗೊತ್ತು. ಸದರಿಯವರಿಗೆ ದಾವಾ ಸರ್ವೆ ನಂಬರ್ ನಲ್ಲಿ ಒಂದುಕಾಲು ಗುಂಟೆಯನ್ನು ಮಾರಾಟ ಮಾಡುತ್ತೇವೆ ಎಂದು ಒಪ್ಪಿ ದಿನಾಂಕ 07.11.2019ರಲ್ಲಿ ಕ್ರಯದ ಕರಾರು ಬರೆದುಕೊಟ್ಟಿದ್ದೆವು ಎಂದರೆ ಸರಿ. ಸಾಕ್ಷಿಯು ಸ್ವಇಚ್ಛೆಯಿಂದ ಅದನ್ನು ರದ್ದು ಮಾಡಿಕೊಂಡೆವು ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಕ್ರಯದ ಹಣ 11,25,000/- ರೂಗಳಿಗೆ ನಿಗದಿ ಆಗಿತ್ತು ಎಂದರೆ ಸರಿ. ವ್ಯವಹಾರ ಸರಿಬರದ ಕಾರಣ ಅದನ್ನು ದಿನಾಂಕ 19.07.2023ರಂದು ರದ್ದು ಮಾಡಿಸಿದೆವು ಎಂದರೆ ಸರಿ. ಸದರಿ ಒಂದುಕಾಲು ಗುಂಟೆಗೆ ಚಕ್ಕುಬಂದಿ ಪೂರ್ವಕ್ಕೆ ಇದೇ ನಂಬರ್ ನಲ್ಲಿ ಉಳಿಕೆ ಜಮೀನು, ಪಶ್ಚಿಮಕ್ಕೆ ಪ್ರಕಾಶ್‌ರವರ ಮನೆ, ಉತ್ತರಕ್ಕೆ ಇದೇ ಸರ್ವೆ ನಂಬರ್ ಪೈಕಿ ಉಳಿಕೆ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ರಸ್ತೆ ಎಂದು ತೋರಿಸಿದ್ದೆವು ಎಂದರೆ ಸರಿ. ಸದರಿ ಅಗ್ರಿಮೆಂಟ್ ಮಾಡುವ ಕಾಲಕ್ಕೆ ಸ್ಕೆಚ್ ಮಾಡಿಸಿರಲಿಲ್ಲ ಎಂದರೆ ಸರಿ. ಸದರಿ ಅಗ್ರಿಮೆಂಟನ್ನು 3 ಎಕರೆ 20 ಗುಂಟೆ ಪೈಕಿ ಒಂದುಕಾಲು ಗುಂಟೆಯನ್ನು ಮಾರಾಟ ಮಾಡುತ್ತೇವೆ ಎಂದು ಮಾಡಿಕೊಟ್ಟಿದ್ದೆವು ಎಂದರೆ ಸರಿ.

6. ದಾವಾ ಸರ್ವೆ ನಂ.51/1ರಲ್ಲಿ 3 ಎಕರೆ 20 ಗುಂಟೆಯ ಮೇಲೆ 25,000/- ರೂಗಳನ್ನು ರೈತರ ಸೇವಾ ಸಹಕಾರ ಸಂಘ ನಿಯಮಿತ, ಬಿಡದಿ ಇವರಿಂದ ಸಾಲ ಪಡೆದುಕೊಂಡು ಆಧಾರ ಮಾಡಿ, ಆಧಾರ ಪತ್ರವನ್ನು ದಿನಾಂಕ 20.05.2015ರಲ್ಲಿ ನೊಂದಣಿ ಮಾಡಿಸಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿಗೆ ದಾಖಲೆಯ ದೃಢೀಕೃತ ಪ್ರತಿಯನ್ನು ತೋರಿಸಿದಾಗ ನನ್ನ ಸಹಿ ಅಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿರುವ ಫೋಟೋ ನನ್ನದೇ. ದಿನಾಂಕ 04.01.2019ರಲ್ಲಿ ಸದರಿ ಸಾಲವನ್ನು ತೀರಿಸಿ, ಸದರಿ ಸಹಕಾರ ಸಂಘದಿಂದ ತೀರುವಳಿ ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿ. ಸಾಕ್ಷಿಗೆ ಪ್ರತಿವಾದಿಯು ಸಲ್ಲಿಸಿರುವ ದಿನಾಂಕ 08.08.2017ರ ಲಿಖಿತ ಹೇಳಿಕೆಯನ್ನು ತೋರಿಸಿ, ಈ ಸಹಿಗಳು ನಿಮ್ಮದೇ ಸಹಿಗಳು ಎಂದರೆ ಸಾಕ್ಷಿಯು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯವರಿಗೆ ದಿನಾಂಕ 04.02.2025ರಂದು ಸಲ್ಲಿಸಿರುವ

ಸಾಕ್ಷಿಯು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ಸಹಿಗಳನ್ನು ತೋರಿಸಿ ಇವು ನಿಮ್ಮದೇ ಸಹಿಗಳು ಎಂದರೆ ಸಾಕ್ಷಿಯು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಪ್ರತಿವಾದಿಯ ಪರ ವಕೀಲರು ಪ್ರತಿವಾದಿಯ ಪರವಾಗಿ ದಿನಾಂಕ 27.06.2017ರಂದು ಸಲ್ಲಿಸಿರುವ ವಕಾಲತ್‌ನಲ್ಲಿರುವ ಟಿ.ಅನಿತಾ ಎಂಬ ಸಹಿಯನ್ನು ತೋರಿಸಿ, ನಿಮ್ಮದೇ ಸಹಿ ಎಂದರೆ ಸಾಕ್ಷಿಯು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 04.02.2025ರಂದು ದಾಖಲಾಗಿರುವ ಮುಂದುವರೆದ ಮುಖ್ಯ ವಿಚಾರಣೆಯ ಪುಟ 5, ಪಾಟೀ ಸವಾಲು ದಿನಾಂಕ 16.08.2025ರಂದು ದಾಖಲಿಸಿರುವ ಸಾಕ್ಷ್ಯದಲ್ಲಿರುವ ಪುಟ 6 ಮತ್ತು 7ರಲ್ಲಿರುವ ಸಹಿಗಳನ್ನು ತೋರಿಸಿದಾಗ ನನ್ನದೇ ಒಂದು ಒಪ್ಪಿಕೊಂಡಿರುತ್ತಾರೆ. ನಿಪಿ-9ರಲ್ಲಿರುವ ಟಿ.ಅನಿತಾ ಎಂಬ ಸಹಿಗಳನ್ನು ತೋರಿಸಲಾಗಿ ನನ್ನದಲ್ಲ ಎಂದು ನುಡಿದಿರುತ್ತಾರೆ.

7. ನಿಪಿ-7 ವಾಪಸ್ಸಾಗಿರುವ ಆರ್.ಪಿ.ಎ.ಡಿ ಕವರ್ ನಲ್ಲಿರುವ ವಿಳಾಸ ನನ್ನದೇ. ನಿಪಿ-7 ನೋಟಿಸ್ ಬಂದಾಗ ತೆಗೆದುಕೊಳ್ಳುವುದಿಲ್ಲ ಎಂದು ತಿರಸ್ಕರಿಸಿದ್ದೀರಿ ಎಂದರೆ ಸಾಕ್ಷಿಯು ಹೌದು, ಕಳುಹಿಸಿರಬಹುದು ಎಂದು ನುಡಿಯುತ್ತಾರೆ. ನಿಪಿ-7ನ್ನು ವಾದಿ ವಿಜಯರವರು ಕಳುಹಿಸಿದ್ದಾರೆ ಎಂಬ ವಿಚಾರ ಗೊತ್ತಿದ್ದು ನಾನು ತಿರಸ್ಕರಿಸಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೂ ಮುಂಚೆ ವಾದಿ ಹಾಗೂ ನಿಮ್ಮ ನಡುವೆ ಮಾತುಕತೆಯಾಗಿತ್ತು ಎಂದರೆ ಸಾಕ್ಷಿಯು ವಾದಿ ಯಾರೆಂದೇ ಗೊತ್ತಿಲ್ಲ, ನನ್ನ ಪತಿ ಮಾತನಾಡಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ಪತಿ ಏನೆಂದು ಮಾತನಾಡಿದರು ಎಂದರೆ ಸಾಕ್ಷಿಯು ಸಾಲ ಕೊಟ್ಟಿದ್ದರು, ಸಾಲ ವಾಪಸ್ ಕೊಟ್ಟರು ಮುಗಿಯಿತು ಎಂದು ನುಡಿಯುತ್ತಾರೆ. ಸಾಲ ಪಡೆದುಕೊಂಡಿದ್ದು ಒಂದೂವರೆ ಲಕ್ಷ. ನಾವು ವಾಪಸ್ ಕೊಟ್ಟದ್ದು ಒಂದೂವರೆ ಲಕ್ಷ. ಸಾಲ ಪಡೆದುಕೊಂಡಾಗ ಪತ್ರ ಬರೆದುಕೊಟ್ಟಿದ್ದೆವು. ಸಾಕ್ಷಿಯು ಮುಂದುವರೆದು ಸಾಲ ವಾಪಸ್ ಪಾವತಿ ಮಾಡಿದಗಲೂ ಬರೆದುಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಾವು ಸಾಲದ ಹಣ ವಾಪಸ್ ಕೊಟ್ಟಾಗ ಆ ಪತ್ರದ ಹಿಂದೆಯೇ ಬರೆದುಕೊಟ್ಟೆವು. ಆ ದಾಖಲೆ

ನಿಪಿ-9 ದಾಖಲೆಯಾ ಎಂದರೆ ಅಲ್ಲ. ನಾವು ವಾದಿಗೆ ಸಾಲ ವಾಪಸ್ ಕೊಟ್ಟಾಗ, ಸಾಲ ವಾಪಸ್ ಕೊಟ್ಟಿದ್ದೀರಿ, ನಿಮಗೂ, ನಮಗೂ ಸಂಬಂಧ ಇಲ್ಲ ಎಂದು ವಾದಿಯಿಂದ ಬರವಣಿಗೆ ಮಾಡಿಸಿಕೊಳ್ಳಲಿಲ್ಲ.

8. ನಾವು ಸಾಲ ವಾಪಸ್ ಕೊಟ್ಟು 12 ವರ್ಷಗಳಾಗಿವೆ. ಸಾಲ ತೆಗೆದುಕೊಂಡು 12 ವರ್ಷಗಳಾಗಿವೆ. ನಿಮ್ಮ ಪ್ರಕಾರ ಸಾಲ ಪಡೆದುಕೊಂಡದ್ದು 2014ರಲ್ಲಾ ಎಂದರೆ ಗೊತ್ತಿಲ್ಲ. ನಾವು ಸಾಲದ ಹಣವನ್ನು ವಾಪಸ್ ಕೊಟ್ಟಾಗ, ಸಾಲದ ಹಣ ವಾಪಸ್ ಕೊಟ್ಟ ಬಗ್ಗೆ ಅವರಿಂದ ಪತ್ರ ಬರೆಸಿಕೊಳ್ಳಲು ತೊಂದರೆ ಇರಲಿಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ಪೇಪರ್ ಕೊಡಿ ಎಂದು ಕೇಳಿದೆವು, ಕೊಡುತ್ತೇವೆ ಎಂದು ಹೇಳಿದರು, ಕೊಡಲಿಲ್ಲ, ಅದೇ ಪೇಪರ್ ಮೇಲೆ ಈ ಕೇಸು ಹಾಕಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವಇಚ್ಛೆಯಿಂದ ವಾದಿಯ ಗಂಡ ನಮ್ಮ ಬಳಿ ಜೋಳ ತೆಗೆದುಕೊಂಡು ಹೋಗಿದ್ದರು, ಹಣ ಕೊಡಲಿಲ್ಲ ಎಂದು ನುಡಿಯುತ್ತಾರೆ. ಅದರಿಂದಲೇ ನನ್ನ ಪತಿ ಸ್ನೇಹಿತರಾಗಿದ್ದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸಾಲ ಕೊಡುವಾಗಲೇ ಅವರ ಜೋಳ ತೆಗೆದುಕೊಂಡು ಹೋದದ್ದು ಎಂದು ನುಡಿಯುತ್ತಾರೆ. ಕೃಷ್ಣಪ್ಪ ನಿಮಗೆ ಗೊತ್ತಿಲ್ಲವಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.